ವಾರದ ಪತ್ರ

## ಮಿನುಗುತಾರೆಯ ನೆನಪಿನ ಮೆರವಣಿಗೆ

ಚಂದನ ವಾಹಿನಿಯ ಉತ್ತಮ ಕಾರ್ಯಕ್ರಮಗಳಲ್ಲೊಂದು 'ದಿಗ್ಗಜರು'. ಪ್ರತಿ ರವಿವಾರ ಸಿನಿಮಾ ಜಗತ್ತಿನ ಒಬ್ಬ ಸಾಧಕರ ಜೀವನದ ಏಳುಬೀಳುಗಳನ್ನು ಈ ಕಾರ್ಯಕ್ರಮದಲ್ಲಿ ಕಟ್ಟಿಕೊಡುತ್ತಾರೆ. ಈಚೆಗೆ ಮಿನುಗುತಾರೆ ಕಲ್ಪನಾ ಕುರಿತು ಸಚಿತ್ರ ವಿವರವನ್ನು ನೀಡಿದರು. ಅದರಿಂದಾಗಿ ಅವರ ಹಳೆಯ ಚಿತ್ರಗಳನ್ನು ಮೆಲುಕು ಹಾಕುವಂತಾಯಿತು. ನಾಯಕಿ ಪ್ರಧಾನ ಚಿತ್ರಗಳಿಗೆ ನಾಂದಿ ಹಾಕಿದ ಪುಟ್ಟಣ್ಣ ಕಣಗಾಲ್ ಅವರ ಗರಡಿಯಲ್ಲಿ ಪಳಗಿದ ಕಲ್ಪನಾ ತಮ್ಮ ಭಾವಪೂರ್ಣ ಅಭಿನಯದಿಂದ ಸಿನಿರಂಗದಲ್ಲಿ ಉತ್ತುಂಗಕ್ಕೇರಿದವರು. ಜನಪ್ರಿಯತೆ ಯಾವಾಗ ಯಾರನ್ನು ಉತ್ತುಂಗಕ್ಕೇರಿಸುತ್ತದೆಯೋ ಅದು ಯಾವಾಗ ಪಾತಾಳಕ್ಕೆ ಬೀಳಿಸುತ್ತದೆಯೋ ತಿಳಿಯದು.

—ಮುರಲೀಧರ ಕುಲಕರ್ಣಿ, ಬೀದರ್

## ತಿಪ್ಪೆಗೆಸೆಯಬೇಕು ಅಪಹಾಸ್ಯ

ಝೀ ಕನ್ನಡದಲ್ಲಿ ಶುರುವಾಗಿರುವ 'ಮಹಾನಟಿ' ಹೊಸ ಕಾರ್ಯಕ್ರಮದಲ್ಲಿಯೂ ನಿರೂಪಕಿ ಅನುಶ್ರೀ ತಮ್ಮ ಹಳೆಯ ಚಾಳಿಯನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಹಿರಿಯರ ಕೇಶಹೀನತೆಯನ್ನು ಅವರು ಅಪಹಾಸ್ಯ ಧಾಟಿಯಲ್ಲಿ ನಿರೂಪಿಸಿದ್ದಾರೆ. ಆಗ ಸಭಿಕರು ಕೇಕೆ ಹಾಕಿ ನಕ್ಕಿದ್ದಾರೆ. ವಿಗ್ ಧರಿಸುವ ನಟ ಕೂಡ ನಕ್ಕಿದ್ದು ಬೇಸರ ಅನಿಸಿತು. ದೇಹದೂಷಣೆಯನ್ನು ಹಾಸ್ಯವೆಂದು ಇಂದೂ ತಿಳಿದಿರುವ ಜನ ತಿಳಿಗೇಡಿಗಳು. ಇದಕ್ಕೇ ನಮ್ಮ ಹಾಸ್ಯ ತಿಪ್ಪೆ ಸೇರಿರುವುದು.

—ವಿನಯ್ ಎಂ.ಎಸ್., ಬೆಂಗಳೂರು




## ಅಜ್ಜಿಯನ್ನು ನೆನಪಿಸುವ ಬೊಂಬಾಟ್ ಭೋಜನ

ನಟ, ನಿರ್ದೇಶಕ ಸಿಹಿಕಹಿ ಚಂದ್ರು, ತೆರೆಯಲ್ಲಿ ಪಾತ್ರಗಳಿಗೆ ಮಸಾಲೆ ಹಾಕಿ ನಗುವನ್ನು ಉಕ್ಕಿಸಿದವರು. ಈಗ 'ಬೊಂಬಾಟ್ ಭೋಜನ' ಕಾರ್ಯಕ್ರಮದಲ್ಲಿ ಭೋಜನ ಪ್ರಿಯರಿಗೆ ರಸದೌತಣ ಬಡಿಸುತ್ತಿದ್ದಾರೆ. ಈ ಕಾರ್ಯಕ್ರಮ ಸಾಕಷ್ಟು ವೈಶಿಷ್ಟ್ಯಗಳನ್ನು ಹೊಂದಿದೆ. ರಾಜ್ಯದಾದ್ಯಂತ ತಿರುಗಾಡಿ ಆ ನೆಲದ ರುಚಿಯನ್ನು ಸವಿಯುತ್ತಾ ವೀಕ್ಷಕರಿಗೂ ಅದರ ಪರಿಚಯ ಮಾಡುವ ಕಾರ್ಯಕ್ರಮ 'ನಮ್ಮೂರ ಊಟ'. ವೀಕ್ಷಕರ ಮೆಚ್ಚುಗೆ ಪತ್ರಗಳಿಗೆ ಉತ್ತರವಾಗಿ ಅವರ ಮನೆಗೆ ಭೇಟಿ ನೀಡಿ ಆತಿಥ್ಯ. ಲೇಡೀಸ್ ಕ್ಲಬ್‌ಗಳಿಗೆ ಭೇಟಿ ನೀಡಿ ತಾವೇ ತಯಾರಿಸಿದ ಪದಾರ್ಥ ಹಂಚುವ 'ಸವಿ ಊಟ', 'ಕೈ ರುಚಿ' ಉತ್ತಮ ಆಹಾರ ಮತ್ತು ಆರೋಗ್ಯದ ಮಾಹಿತಿಯನ್ನು ಈ ಹಿಂದೆ ನೀಡುತ್ತಿದ್ದರು.

ಹಬ್ಬದ ದಿನ ಮಾಡುವ ವಿಶೇಷ ಭಕ್ಷ್ಯವನ್ನು ಮಾಡಿ ತೋರಿಸುತ್ತಾರೆ. ಬಸುರಿಯ ಬಯಕೆ ಊಟ, ಬಾಣಂತನದ ಆರೈಕೆಯ ಅಡುಗೆಗಳು, ಮಕ್ಕಳ ಪಾಲನೆಯ ಆಹಾರಗಳು, ಟಿಫಿನ್ ಬಾಕ್ಸ್ ಸ್ಪೆಷಲ್, ಹಪ್ಪಳ ಸಂಡಿಗೆ ವಿಶೇಷ ಕಾರ್ಯಕ್ರಮಗಳನ್ನು ನೋಡುತ್ತಿದ್ದಾಗ ನಮ್ಮ ಮನೆಯ ಹಿರಿಯ ಅಜ್ಜಿಯೊಬ್ಬರು ಇದರ ಬಗ್ಗೆ ಹೇಳುತ್ತಿದ್ದಾರೆ ಎನಿಸುತ್ತದೆ. ಹಿಂದಿನ ಎಲ್ಲ ಒಳ್ಳೆಯ ಅಂಶಗಳ ಜೊತೆ 4ನೇ ಸೀರೀಸ್ ಇನ್ನೂ ಚೆನ್ನಾಗಿ ಮೂಡಿಬರಲಿ.

—ವೀಣಾ ಶಂಕರ್, ಬೆಂಗಳೂರು

## ಉಪ್ಪಿನ ಹೊಸಬಗೆಯ ಸೂತ್ರ!

ಟೀವಿಯ ಒಂದು ಜಾಹೀರಾತಿನ ತುಣುಕು ಹೀಗಿದೆ: ಅಮ್ಮ ಮಗನಿಗೆ 'ಸೋಡಿಯಂ+ಕ್ಲೋರೈಡ್' ಸೇರಿದರೆ ಏನು ಅಂತಾಳೆ. ಆಗ ಹಾರ್ಲಿಕ್ಸ್ ಕುಡಿದ ಮಗ 'ಸಾಲ್ಟ್' ಅಂತಾನೆ. ಇದೊಂದು ಹೊಸ ಆವಿಷ್ಕಾರವೇ ಸರಿ. ಏಕೆಂದರೆ, ಸಾಲ್ಟ್ ಬರಬೇಕಾದರೆ ಸೋಡಿಯಂ ಹೈಡ್ರಾಕ್ಸೈಡ್‌ಗೆ ಕ್ಲೋರಿನ್ ಬೆರೆಸಿದರೆ ಸೋಡಿಯಂ ಕ್ಲೋರೈಡ್ (Nacl) — ಸಾಲ್ಟ್ ಬರುವುದು. ಇದನ್ನು ವಿಜ್ಞಾನದ ಮುನ್ನಡೆ ಎನ್ನೋಣವೇ?

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಗಾಂಭೀರ್ಯ ಕಳೆದುಕೊಂಡಿರುವ ಸಮೀಕ್ಷೆಗಳು

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸುದ್ದಿ ವಾಹಿನಿಗಳು ಮೈಕ್ ಹಿಡಿದು ಸಮೀಕ್ಷೆ ನಡೆಸುತ್ತವೆ. ಇದು ಶ್ಲಾಘನೀಯ ಕಾರ್ಯವೇ ನಿಜ. ಆದರೆ ಬಹುತೇಕ ಸಂದರ್ಭದಲ್ಲಿ ಅವರ ಕ್ರಿಯೆಯಲ್ಲಿ ಗಾಂಭೀರ್ಯ ಕಾಣದೆ ತಮಾಷೆ ಕಾಣುತ್ತದೆ. ಅದಕ್ಕಿಂತ ಹೆಚ್ಚಾಗಿ ವ್ಯಕ್ತಿಗಳು ಮತ್ತು ಪಕ್ಷದ ಬಗೆಗೆ ಪಕ್ಷಪಾತ ತೋರಿಸುವುದು ಎದ್ದು ಕಾಣುತ್ತದೆ.

ವರದಿಗಾರನ ಪ್ರಶ್ನೆಗೆ ಉತ್ತರಿಸುವ ಸಂದರ್ಶಕ ನಿರ್ದಿಷ್ಟ ಒಂದು ಪಕ್ಷವನ್ನು ಹೊಗಳಿದರೆ ಅವರಿಗೆ ತುಸು ಹೆಚ್ಚು ಅವಕಾಶ ನೀಡುವುದು ಮತ್ತು ಟೀಕಿಸುವವರನ್ನು ಅರ್ಧದಲ್ಲಿಯೇ ಕಟ್ ಮಾಡುವುದು ಕೂಡ ಎದ್ದು ಕಾಣುತ್ತದೆ. ಕೆಲವು ಸಂದರ್ಭದಲ್ಲಿ ಸಮೀಕ್ಷೆ ಮಾಡುವ ರಾಜಕೀಯ ಪಂಡಿತರಿಗೆ (ವರದಿಗಾರರಿಗೆ) ಪಕ್ಷ, ಸಿದ್ಧಾಂತ, ರಾಜಕೀಯ ಮತ್ತು ಕ್ಷೇತ್ರದ ವಿವರ ಮತ್ತು ಸ್ಥಳೀಯ ಅಭ್ಯರ್ಥಿಗಳ ಬಗ್ಗೆ ಮಾಹಿತಿಯೂ ಇರುವುದಿಲ್ಲ. ಸಮೀಕ್ಷೆಯನ್ನು ಕಾಟಾಚಾರಕ್ಕೆ ಮಾಡಿದಂತೆ ಇರುತ್ತದೆ. ನಮ್ಮ ಸುದ್ದಿ ವಾಹಿನಿಗಳು ಇನ್ನೂ ಹೆಚ್ಚಿನ ವೃತ್ತಿಪರತೆ ಮತ್ತು ನಿಷ್ಪಕ್ಷಪಾತ ಗುಣವನ್ನು ತೋರಿಸುವ ಅಗತ್ಯ ಇದೆ.

—ರಮಾನಂದ ಶರ್ಮಾ, ಬೆಂಗಳೂರು

## ರಂಗು ರಂಗಿನ ಹಬ್ಬ

ಹಬ್ಬಗಳಿಗೂ ಮತ್ತು ನಮ್ಮ ಧಾರಾವಾಹಿಗಳಿಗೂ ಅವಿನಾಭಾವ ಸಂಬಂಧ. ಬಹುತೇಕ ಧಾರಾವಾಹಿಗಳಲ್ಲಿ ಹಬ್ಬ ಏನಾದರೂ ಬಂದರೆ ಥಟ್ ಅಂತಾ ಸೆಟ್ಟು, ಡ್ರೆಸ್ಸು, ಅಲಂಕಾರ ಎಲ್ಲಾ ಸಿದ್ಧವಾಗಿಯೇ ಬಿಡುತ್ತವೆ. ನಾವು ನೋಡುತ್ತಿದ್ದ ಧಾರಾವಾಹಿ ಇದೇನಾ ಎನ್ನುವಷ್ಟರ ಮಟ್ಟಿಗೆ ಅದು ಬದಲಾಗಿ ಬಿಡುತ್ತದೆ. ಅದರಲ್ಲಿ ಹಬ್ಬದ ಮಹತ್ವ, ಹಿನ್ನೆಲೆಯನ್ನು ಹೇಳುವುದು ಚೆನ್ನಾಗಿರುತ್ತದೆ. ಒಂದು ದಿನದ ಹಬ್ಬವನ್ನು ಎಳೆದೂ ಎಳೆದು ವಾರಗಟ್ಟಲೇ ತೋರಿಸುತ್ತಾರೆ. ನಂತರ ಮಾಮೂಲಿ ಖಳ ನಾಯಕಿಯರ ಅಬ್ಬರ ಹಬ್ಬದ ಸಂಭ್ರಮದ ನೆನಪನ್ನೆಲ್ಲ ಮಂಕಾಗಿಸುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಾಧವ್ ಕೆಫೆಗೆ ಏನಾಯಿತು?

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿ ಪ್ರಸಾರದ ಸಮಯವನ್ನು ಸಂಜೆ 6.30ಕ್ಕೆ ಬದಲಾಯಿಸಿರುವುದು ಸರಿಯಿಲ್ಲ. ಅನೇಕರು ಧಾರಾವಾಹಿಯನ್ನು ಇಷ್ಟಪಟ್ಟಿದ್ದಾರೆ. ಬದಲಾದ ಸಮಯಕ್ಕೆ ಅದನ್ನು ನೋಡಲು ವೀಕ್ಷಕರು ತಮ್ಮ ಕಚೇರಿಗಳಲ್ಲಿ ನಿತ್ಯದ ಕೆಲಸವನ್ನು ಮುಗಿಸಿ ಮನೆಗೆ ಮರಳಿರುವುದಿಲ್ಲ. ಬೆಳಗಿನ ಮರುಪ್ರಸಾರದ ಸಮಯ ಕೂಡ ಹೊರಗಡೆ ಹೋಗಿ ದುಡಿಯುವ ಜನರಿಗೆ ಪೂರಕವಾಗಿಲ್ಲ. ಹಿಂದಿನಂತೆ ರಾತ್ರಿ 8.30ಕ್ಕೆ ಪ್ರಸಾರ ಮಾಡಲಿ.

ಮತ್ತೊಂದು ಮುಖ್ಯ ಸಂಗತಿ ಎಂದರೆ, ತುಳಸಿಯ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ಜಾಸ್ತಿಯಾಯಿತು. ಅನೇಕ ಸನ್ನಿವೇಶಗಳು ಏಕತಾನತೆಯಿಂದ ಕೂಡಿವೆ. ಮಾಧವ್ ಅವರ ಕೆಫೆ ಕಥೆ ಏನಾಯಿತು? ಸಹೋದರರು ಕೋಟ್ಯಂತರ ರೂಪಾಯಿ ವ್ಯವಹಾರ, ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಅವರು ಒಮ್ಮೆಯೂ ಕೆಲಸಕ್ಕೆಂದು ಕಚೇರಿಗೆ ಹೋದ ನಿದರ್ಶನವಿಲ್ಲ.

—ಅರುಣ್ ಕೆ.ಎನ್.